# ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1981

(ಕರ್ನಾಟಕ ರಾಜ್ಯಪತ್ರ ಗುರುವಾರ, ಮಾರ್ಚ್ 29, 2001, ಭಾಗ 4–ಎ, ಪುಟ ಸಂಖ್ಯೆ 410–416ರಲ್ಲಿ ಪ್ರಕಟಿತವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಅಧಿನಿಯಮವು ಅನ್ವಯವಾಗತಕ್ಕಂಥ ಇಲಾಖಾ ವಿಚಾರಣೆಗಳು
3. ಪರಿಭಾಷೆಗಳು
4. 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸುವ ಬಗ್ಗೆ ಅಧಿಕೃತಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ
5. ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರಾತಿಯನ್ನು ಒತ್ತಾಯಪಡಿಸಲು ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರದ ಅಧಿಕಾರ
6. 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸಬಹುದಾದಂಥ ಪ್ರಾದೇಶಿಕ ಪರಿಮಿತಿಗಳು

6ಎ. ಶೋಧನಾ ವಾರಂಟನ್ನು ಹೊರಡಿಸುವುದು ಇತ್ಯಾದಿ

7. ನಿಯಮಗಳ ರಚನಾಧಿಕಾರ
8. ನಿರಸನ ಮತ್ತು ಉಳಿಸುವಿಕೆ

# 1981ರ ಕರ್ನಾಟಕ ಅಧಿನಿಯಮ ಸಂಖ್ಯೆ 29

(1981ರ ಏಪ್ರಿಲ್ ಹದಿನೈದನೇ ದಿವಸದಂದು ಕರ್ನಾಟಕದ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1981

(1981ರ ಏಪ್ರಿಲ್ ಹತ್ತನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

(1981ರ ಅಧಿನಿಯಮ 43 ಮತ್ತು 1986ರ ಅಧಿನಿಯಮ 26ರ ಮೂಲಕ ತಿದ್ದುಪಡಿಯಾದಂತೆ)

**ಕೆಲವು ಇಲಾಖಾ ವಿಚಾರಣೆಗಳ ಸಾಕ್ಷಿದಾರರು ಹಾಜರಾಗುವಂತೆ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸುವುದಕ್ಕಾಗಿ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿ, ಕೆಲವು ಇಲಾಖಾ ವಿಚಾರಣೆಗಳಲ್ಲಿ ಸಾಕ್ಷಿದಾರರು ಹಾಜರಾಗುವಂತೆ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸುವುದಕ್ಕಾಗಿ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು [1][ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ ಮತ್ತು ಸಂಕೀರ್ಣ ಉಪಬಂಧಗಳ][1]) ಅಧಿನಿಯಮ, 1981 ಎಂದು ಕರೆಯತಕ್ಕದು.

1. 1981ರ ಅಧಿನಿಯಮ ಸಂಖ್ಯೆ 43ರ ಪ್ರಕರಣ ಸಂಖ್ಯೆ 2ರ ಮೂಲಕ 5–5–1981ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಇದು 1981ರ ಮಾರ್ಚ್ ಒಂದನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

**2. ಅಧಿನಿಯಮವು ಅನ್ವಯವಾಗತಕ್ಕಂಥ ಇಲಾಖಾ ವಿಚಾರಣೆಗಳು.–** ಈ ಅಧಿನಿಯಮದ ಉಪಬಂಧಗಳು,–

(ಎ) ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸರ್ಕಾರಿ ಸೇವೆಗಳಿಗೆ ಅಥವಾ ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳಿಗೆ;

(ಬಿ) ಯಾರು ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಸರ್ಕಾರಿ ಸೇವೆಗೆ ಅಥವಾ ಹುದ್ದೆಗೆ ನೇಮಕಗೊಂಡಿದ್ದು,–

(i) ಕರ್ನಾಟಕ ರಾಜ್ಯದಲ್ಲಿನ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ;

(ii) ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾಗಿರುವ ಮತ್ತು ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮದಲ್ಲಿ;

(iii) ಕೇಂದ್ರ ಅಧಿನಿಯಮದ ಅಥವಾ ಕರ್ನಾಟಕ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಲಾಗಿರುವ ಮತ್ತು ಕರ್ನಾಟಕ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮದಲ್ಲಿ;

(iv) ಕಂಪನಿಗಳ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 1)ರ 617ನೇ ಪ್ರಕರಣದ ಅರ್ಥವ್ಯಾಪ್ತಿಯೊಗಳಗೆ ಬರುವ ಯಾವ ಸರ್ಕಾರಿ ಕಂಪನಿಯಲ್ಲಿ ಸಂದಾಯಿತ ಷೇರು ಬಂಡವಾಳದ ಶೇಕಡಾ ಐವತ್ತೊಂದರಷ್ಟಕ್ಕಿಂತ ಕಡಿಮೆ ಇಲ್ಲದಷ್ಟು ಷೇರು ಬಂಡವಾಳವನ್ನು ರಾಜ್ಯ ಸರ್ಕಾರವು ಧಾರಣಮಾಡಿರುವುದೋ ಆ ಯಾವುದೇ ಸರ್ಕಾರಿ ಕಂಪನಿಯಲ್ಲಿ ಅಥವಾ ಅಂಥ ಸರ್ಕಾರಿ ಕಂಪನಿಗೆ ಸಹಾಯಕವಾಗಿರುವಂಥ ಯಾವುದೇ ಕಂಪನಿಯಲ್ಲ;

(v) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (ಕರ್ನಾಟಕ ಅಧಿನಿಯಮ 1960ರ 17)ರ ಮೇರೆಗೆ ನೋಂದಾಯಿತವಾದ ಯಾವುದೇ ಸಂಘದಲ್ಲಿ;

(vi) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ 1959 (ಕರ್ನಾಟಕ ಅಧಿನಿಯಮ 1959ರ 11)ರ ಮೇರೆಗೆ ನೋಂದಾಯಿತವಾದ ಯಾವುದೇ ಸಂಘದಲ್ಲಿ

– ಸೇವೆಯಲ್ಲಿರುವ ಅಥವಾ ಅವುಗಳಿಂದ ವೇತನ ಪಡೆಯುವರೋ ಆ ವ್ಯಕ್ತಿಗಳಿಗೆ

– ಸಂಬಂಧಪಟ್ಟಂತೆ ನಡೆಸಿದ ಪ್ರತಿಯೊಂದು ಇಲಾಖಾ ವಿಚಾರಣೆ ಅನ್ವಯವಾಗತಕ್ಕದು.

**3. ಪರಿಭಾಷೆಗಳು.–** ಈ ಅಧಿನಿಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು–

(ಎ) "ಇಲಾಖಾ ವಿಚಾರಣೆ" ಎಂದರೆ–

(i) ಕರ್ನಾಟಕ ರಾಜ್ಯ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ; ಅಥವಾ

(ii) ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೇರೆಗೆ ರಚಿಸಿದ ಅಥವಾ 313ನೇ ಅನುಚ್ಛೇದದ ಮೇರೆಗೆ ಮುಂದುವರಿಸಲಾದ ಯಾವುದೇ ನಿಯಮದ

– ಮೇರೆಗೆ ಮತ್ತು ಇವುಗಳಿಗೆ ಅನುಸಾರವಾಗಿ, ಈ ಅಧಿನಿಯಮವು ಅನ್ವಯವಾಗುವ ಯಾರೇ ವ್ಯಕ್ತಿಯ ವಿರುದ್ಧ ದುರ್ನಡತೆಯ ಯಾವುದೇ ಆಪಾದನೆಯ ಬಗ್ಗೆ ನಡೆಸುವ ವಿಚಾರಣೆ.

(ಬಿ) "ವಿಚಾರಣಾ ಪ್ರಾಧಿಕಾರ" ಎಂದರೆ ಇಲಾಖಾ ವಿಚಾರಣೆಯನ್ನು ನಡೆಸಲು ರಾಜ್ಯ ಸರ್ಕಾರವು ಅಥವಾ ಕರ್ನಾಟಕ ಉಚ್ಚನ್ಯಾಯಾಲಯವು ಅಥವಾ ಕರ್ನಾಟಕ ಮುಖ್ಯ ನ್ಯಾಯಾಧೀಶರು ಅಥವಾ [1][ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು][1] ಅಥವಾ ರಾಜ್ಯ ಸರ್ಕಾರಕ್ಕೆ ಅಧೀನನಾದ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು ನೇಮಕಮಾಡಿದ ಅಧಿಕಾರಿ ಅಥವಾ ಪ್ರಾಧಿಕಾರ ಮತ್ತು ಇದು ಅಂಥ ವಿಚಾರಣೆಯನ್ನು ನಡೆಸಲು ತತ್ಕಾಲಿದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಥವಾ ನಿಯಮದ ಮೂಲಕ ಅಥವಾ ಅದರ ಮೇರೆಗೆ ಶಕ್ತಗೊಳಿಸಲಾಗಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರ.

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 2ರ ಮೂಲಕ ಪ್ರತಿಯೋಜಿಸಲಾಗಿದೆ. (29-9-1986)

(ಗ) [1]["ಲೋಕಾಯುಕ್ತ" ಮತ್ತು "ಉಪ ಲೋಕಾಯುಕ್ತ" ಎಂದರೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ 4)ರ ಮೇರೆಗೆ ನೇಮಕಗೊಂಡ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ.][1]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 2ರ ಮೂಲಕ ಪ್ರತಿಯೋಜಿಸಲಾಗಿದೆ. (29–9–1986)

[2][x x a][2]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 2ರ ಮೂಲಕ ಬಿಟ್ಟುಬಿಡಲಾಗಿದೆ. (29–9–1986)

**4. 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸುವ ಬಗ್ಗೆ ಅಧಿಕೃತಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು ಯಾವುದೇ ಇಲಾಖಾ ವಿಚಾರಣೆಯ ಉದ್ದೇಶಗಳಿಗಾಗಿ, ಯಾವುದೇ ವರ್ಗದ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ ಸೇರಿದ ಯಾರೇ ವ್ಯಕ್ತಿಯನ್ನು ಸಾಕ್ಷಿದಾರನೆಂದು ಸಮನ್ ಮಾಡುವುದು ಅಥವಾ ಅವನಿಂದ ಯಾವುದೇ ದಸ್ತಾವೇಜನ್ನು ತರಿಸಿಕೊಳ್ಳುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ ಅದು, ಆದೇಶದ ಮೂಲಕ, ಅಂಥ ವರ್ಗ ಅಥವಾ ಪ್ರವರ್ಗದೊಳಗೆ ಬರುವ ಯಾರೇ ವ್ಯಕ್ತಿಗೆ ಸಂಬಂಧಪಟ್ಟಂತೆ 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸಲು ವಿಚಾರಣಾ ಪ್ರಾಧಿಕಾರವನ್ನು ಅಧಿಕೃತಗೊಳಿಸಬಹುದು ಮತ್ತು ಆ ತರುವಾಯ ವಿಚಾರಣಾ ಪ್ರಾಧಿಕಾರವು ಇಲಾಖಾ ವಿಚಾರಣೆಯ ಯಾವುದೇ ಹಂತದಲ್ಲಿ ಅಂಥ ಅಧಿಕಾರವನ್ನು ಚಲಾಯಿಸಬಹುದು:

[1][ಪರಂತು, ಲೋಕಾಯುಕ್ತ ಸಿಬ್ಬಂದಿಯ ಅಧಿಕಾರಿಯು ವಿಚಾರಣಾ ಪ್ರಾಧಿಕಾರವಾಗಿರುವಲ್ಲಿ, ಅವನು 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು, ಅಧಿಕೃತಗೊಳಿಸಿಲ್ಲದಿದ್ದರೂ ಕೂಡ ಚಲಾಯಿಸಬಹುದು.][1]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 3ರ ಮೂಲಕ ಸೇರಿಸಲಾಗಿದೆ. (29–9–1986)

(2) 1ನೇ ಉಪಪ್ರಕರಣದ ಮೂಲಕ ರಾಜ್ಯ ಸರ್ಕಾರಕ್ಕೆ ಪ್ರದಾನಮಾಡಿದ ಅಧಿಕಾರವನ್ನು–

[1][(ಎ) * * * *][1]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 3ರ ಮೂಲಕ ಬಿಟ್ಟುಬಿಡಲಾಗಿದೆ. (29–9–1986)

(ಬಿ) ಯಾರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆಯೋ ಆ ವ್ಯಕ್ತಿಯು ಸಂವಿಧಾನದ 235ನೇ ಅನುಚ್ಛೇದದ ಮೇರೆಗೆ ಕರ್ನಾಟಕ ಉಚ್ಚನ್ಯಾಯಾಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದರೆ, ಕರ್ನಾಟಕ ಉಚ್ಚನ್ಯಾಯಾಲಯವು;

(ಸಿ) ಯಾವ ವ್ಯಕ್ತಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿಯೋ ಆ ವ್ಯಕ್ತಿಯು ಕರ್ನಾಟಕ ಉಚ್ಚನ್ಯಾಯಾಲಯದ ಅಧಿಕಾರಿ ಅಥವಾ ನೌಕರನಾಗಿದ್ದರೆ, ಕರ್ನಾಟಕದ ಮುಖ್ಯ ನ್ಯಾಯಾಧೀಶರು;

(ಡಿ) ಯಾವ ವ್ಯಕ್ತಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿಯೋ ಆ ವ್ಯಕ್ತಿಗೆ ಸಂಬಂಧಪಟ್ಟಂತೆ ನೇಮಕಾತಿ ಪ್ರಾಧಿಕಾರಿಗಿಂತ ಕೆಳದರ್ಜೆಯವನಾಗಿರದ ಮತ್ತು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು

– ಸಹ ಚಲಾಯಿಸಬಹುದು.

**5. ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರಾತಿಯನ್ನು ಒತ್ತಾಯಪಡಿಸಲು ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರದ ಅಧಿಕಾರ.–** (1) 4ನೇ ಪ್ರಕರಣದ ಮೇರೆಗೆ ಅಧಿಕೃತಗೊಂಡ ಪ್ರತಿಯೊಂದು ವಿಚಾರಣಾ ಪ್ರಾಧಿಕಾರವು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಎಂದರೆ,–

(ಎ) ರಾಜ್ಯದ ಯಾವುದೇ ಭಾಗದಿಂದ ಯಾರೇ ಸಾಕ್ಷಿದಾರರನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣವಚನ ಮಾಡಿಸಿ ಪರೀಕ್ಷಿಸುವುದಕ್ಕೆ;

(ಬಿ) ಸಾಕ್ಷ್ಯವೆಂದು ಹಾಜರಪಡಿಸಬಹುದಾದಂಥ ಯಾವುದೇ ದಸ್ತಾವೇಜವನ್ನು ಅಥವಾ ಇತರ ಸಾಮಗ್ರಿಯನ್ನು ಕಂಡಹಿಡಿಯುವುದನ್ನು ಮತ್ತು ಹಾಜರಪಡಿಸುವುದನ್ನು ಅಗತ್ಯಪಡಿಸುವುದಕ್ಕೆ;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದಕ್ಕೆ

– ಸಂಬಂಧಿಸಿದಂತೆ, ಸಿವಿಲ್ ನ್ಯಾಯಾಲಯವು ದಾವೆಯ ವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, 'ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು, ಭಾರತ ರಿರ್ಸವ ಬ್ಯಾಂಕನ್ನು, ಭಾರತ ಸ್ಟೇಟ್ ಬ್ಯಾಂಕನ್ನು, ಭಾರತ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959 (1959ರ ಕೇಂದ್ರ ಅಧಿನಿಯಮ 38)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಿದಂತೆ ಯಾವುದೇ ಸಹಾಯಕ ಬ್ಯಾಂಕನ್ನು ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 5)ರ 3ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಂವಾದಿ ಹೊಸ ಬ್ಯಾಂಕನ್ನು ಅಥವಾ ಬ್ಯಾಂಕಿಂಗ್ ಕಂಪನಿಯಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ ಕೇಂದ್ರ ಅಧಿನಿಯಮ 40)ರ 3ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಂವಾದಿ ಹೊಸ ಬ್ಯಾಂಕನ್ನು,–

(ಎ) ಯಾವುದನ್ನು, ಭಾರತ ರಿಸರ್ವ್ ಬ್ಯಾಂಕ್, ಭಾರತ ಸ್ಟೇಟ್ ಬ್ಯಾಂಕ್, ಸಹಾಯಕ ಬ್ಯಾಂಕ್ ಅಥವಾ ಸಂವಾದಿ ಹೊಸ ಬ್ಯಾಂಕ್ ರಹಸ್ಯ ಸ್ವರೂಪದ್ದೆಂದು ಕ್ಲೇಮು ಮಾಡುವುದೋ ಆ ಯಾವುದೇ ಲೆಕ್ಕದ ಪುಸ್ತಕವನ್ನು ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು; ಅಥವಾ

(ಬಿ) ಯಾವುದೇ ಅಂಥ ಪುಸ್ತಕವನ್ನು ಅಥವಾ ದಸ್ತಾವೇಜನ್ನು ಆ ಇಲಾಖಾ ವಿಚಾರಣೆಯ ವ್ಯವಹಾರಗಳ ದಾಖಲೆಯ ಭಾಗವೆಂದು ಮಾಡಲು;ಅಥವಾ

(ಸಿ) ಹಾಜರುಪಡಿಸರದ ಯಾವುದೇ ಅಂಥ ಪುಸ್ತಕವನ್ನು ಅಥವಾ ದಸ್ತಾವೇಜನ್ನು ಅದರ ಮುಂದಿರುವ ಯಾವನೇ ಪಕ್ಷಕಾರ ಅಥವಾ ಯಾವನೇ ಇತರ ವ್ಯಕ್ತಿಗೆ ಪರಿಶೀಲನೆಗೆ ಅವಕಾಶ ಕೊಡಲು

– ಒತ್ತಾಯ ಪಡಿಸತಕ್ಕುದಲ್ಲ.

(3) ಯಾರೇ ಸಾಕ್ಷಿದರಾನ ಹಾಜರಾತಿಗಾಗಿ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು ಹೊರಡಿಸಿದ ಪ್ರತಿಯೊಂದು ಪ್ರೊಸೆಸ್ಸನ್ನ, ಯಾರಿಗೆ ಆ ಪ್ರೊಸೆಸ್ಸನ್ನು ಜಾರಿಗೊಳಿಸಬೇಕಾಗಿದೆಯೋ ಅಥವಾ ಅಮಲ್ಜಾರಿ ಮಾಡಬೇಕಾಗಿದೆಯೋ ಆ ಸಾಕ್ಷಿದಾರನು ಅಥವಾ ಇತರ ವ್ಯಕ್ತಿಯು ಯಾರ ಅಧಿಕಾರ ವ್ಯಾಪ್ತಿಯೊಳಗಿನ

ಸ್ಥಳೀಯ ಪರಿಮಿತಿಗಳೊಳಗೆ ಸ್ವಯಿಚ್ಛೆಯಿಂದ ವಾಸಿಸುತ್ತಿರುವವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವವನೋ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿರುನೋ ಆ ಸ್ಥಳೀಯ ಪರಿಮಿತಿಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಜಿಲ್ಲಾ ನ್ಯಾಯಾಧೀಶನ ಮೂಲಕ ಜಾರಿಮಾಡತಕ್ಕುದು ಮತ್ತು ಅಮಲ್ಜಾರಿಗೊಳಿಸತಕ್ಕುದು ಮತ್ತು ಯಾವುದೇ ಅಂಥ ಪ್ರೊಸೆಸ್ಸಿನ ಉಲ್ಲಂಘನೆಗಾಗಿ ಯಾವುದೇ ಕ್ರಮವನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಅಂಥ ಪ್ರತಿಯೊಂದು ಪ್ರೊಸೆಸ್ಸನ್ನು ಆ ಜಿಲ್ಲಾ ನ್ಯಾಯಾಧೀಶನು ಹೊರಡಿಸಿದ ಪ್ರೊಸೆಸ್ಸಾಗಿರುವುದಾಗಿ ಭಾವಿಸತಕ್ಕುದು:

[1][ಪರಂತು, ಲೋಕಾಯುಕ್ತದ ಸಿಬ್ಬಂದಿಯ ಅಧಿಕಾರಿಯು ವಿಚಾರಣಾ ಪ್ರಾಧಿಕಾರವಾಗಿದ್ದರೆ, ಈ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರವನ್ನು ಅಂಥ ವಿಚಾರಣಾ ಪ್ರಾಧಿಕಾರವು ಚಲಾಯಿಸಬಹುದು ಮತ್ತು ಯಾವುದೇ ಅಂಥ ಪ್ರೊಸೆಸ್ಸಿನ ಉಲ್ಲಂಘನೆಗಾಗಿ ಕ್ರಮವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಪ್ರತಿಯೊಂದು ಅಂಥ ಪ್ರೊಸೆಸ್ಸನ್ನು ಜಿಲ್ಲಾ ನ್ಯಾಯಾಧೀಶನು ಹೊರಡಿಸಿದ ಪ್ರೊಸೆಸ್ಸೆಂದು ಭಾವಿಸತಕ್ಕುದು.][1]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 4ರ ಮೂಲಕ ಪ್ರತಿಯೋಜಿಲಾಗಿದೆ. (29–9–1986)

(4) ಈ ಅಧಿನಿಯಮದ ಮೇರೆಗೆ ಯಾವುದೇ ಇಲಾಖಾ ವಿಚಾರಣೆ ನಡೆಸುತ್ತಿರುವ ಪ್ರತಿಯೊಂದು ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ರ 345ನೇ ಮತ್ತು 346ನೇ ಪ್ರಕರಣಗಳ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲವೆಂದು ಭಾವಿಸತಕ್ಕುದು.

**6. 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸಬಹುದಾಂಥ ಪ್ರಾದೇಶಿಕ ಪರಿಮಿತಿಗಳು.–** 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ, ಪ್ರತಿಯೊಂದು ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯು ಈ ಅಧಿನಿಯಮವು ವ್ಯಾಪ್ತವಾಗುವಂಥ ಪ್ರದೇಶದ ಪರಿಮಿತಿಗಳಿಗೆ ವ್ಯಾಪ್ತವಾಗತಕ್ಕುದು.

[1][**6ಎ. ಶೋಧನಾ ವಾರಂಟನ್ನು ಹೊರಡಿಸಿರುವುದು ಇತ್ಯಾದಿ.–** (1) ತನ್ನ ಬಳಿ ಇರುವ ಮಾಹಿತಿಯ ಪರಿಣಾಮವಾಗಿ [2][ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು][2]

(ಎ) ಯಾರಿಗೆ ಈ ಅಧಿನಿಯಮದ ಮೇರೆಗೆ ಸಮನ್ಸ್ ಅಥವಾ ನೋಟೀಸನ್ನು ಕೊಡಲಾಗಿದೆಯೋ ಅಥವಾ ಕೊಡಬಹುದಾಗಿದೆಯೋ ಆ ಯಾರೇ ವ್ಯಕ್ತಿಯು [2][ಅವನಿಂದ ನೇಮಕಗೊಂಡ ವಿಚಾರಣಾ ಪ್ರಾಧಿಕಾರವು][2] ನಡೆಸಬೇಕಾಗಿರುವ ಯಾವುದೇ ವಿಚಾರಣೆಗಾಗಿ ಅಥವಾ ಇತರ ವ್ಯವಹಾರಣೆಗೆ ಅವಶ್ಯ ಅಥವಾ ಉಪಯುಕ್ತವಾಗುವಂಥ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಸ್ವತ್ತು, ದಸ್ತಾವೇಜು ಅಥವಾ ವಸ್ತವನ್ನು ಹಾಜರುಪಡಿಸುವುದಿಲ್ಲವೆಂದು ಅಥವಾ ಹಾಜರುಪಡಿಸುವಹಾಗಿಲ್ಲವೆಂದು;

1. 1981ರ ಅಧಿನಿಯಮ ಸಂಖ್ಯೆ 43ರ, ಪ್ರಕರಣ 3ರ ಮೂಲಕ 5–5–1981ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 5ರ ಮೂಲಕ ಪ್ರತಿಯೋಜಿಲಾಗಿದೆ. (29–9–1986)

(ಬಿ) ಯಾರೇ ವ್ಯಕ್ತಿಯು ಯಾವುದೇ ಹಣವನ್ನು, ಬೆಳ್ಳಿ ಬಂಗಾರವನ್ನು, ಆಭರಣಗಳನ್ನು ಅಥವಾ ಇತರ ಬೆಲೆಯುಳ್ಳ ವಸ್ತುವನ್ನು ಅಥವಾ ಪದಾರ್ಥವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಮತ್ತು ಅಂಥ ಹಣವು, ಬೆಳ್ಳಿ ಬಂಗಾರವು, ಆಭರಣಗಳು ಅಥವಾ ಇತರ ಬೆಲೆಯುಳ್ಳ ವಸ್ತುವು ಅಥವಾ

ಪದಾರ್ಥವು ಬಹಿರಂಗಪಡಿಸಬೇಕೆಂದು ಅಗತ್ಯಪಡಿಸುವಂಥ, ಜಾರಿಯಲ್ಲಿರುವ ಯಾವುದೇ ಕಾನೂನಿನ ಅಥವಾ ನಿಯಮಗಳ ಉದ್ದೇಶಕ್ಕಾಗಿ ಪ್ರಾಧಿಕಾರಗಳಿಗೆ ಬಹಿರಂಗಪಡಿಸದೇ ಇರುವ ಪೂರ್ಣ ಅಥವಾ ಭಾಗಶ: ಆದಾಯವು ಅಥವಾ ಸ್ವತ್ತು ಇರುವುದನ್ನು ತೋರಿಸುತ್ತದೆಂದು ನಂಬಲು ಕಾರಣವಿದ್ದಲ್ಲಿ; ಅಥವಾ

(ಸಿ) [2][ವಿಚಾರಣಾ ಪ್ರಾಧಿಕಾರವು][2] ನಡೆಸಬೇಕಾದ ಯಾವುವೇ ವಿಚಾರಣೆಯ ಅಥವಾ ಇತರ ವ್ಯವಹಾರಣೆಯ ಉದ್ದೇಶಗಳು ಸಾಮಾನ್ಯ ಶೋಧನೆಯಿಂದ ಅಥವಾ ಪರಿಶೀಲನೆಯಿಂದ ಈಡೆರುವುದೆಂದು ಪರ್ಯಾಲೋಚಿಸಿದರೆ–

[2][ಅವನು ಶೋಧನಾ ವಾರಂಟಿನ ಮೂಲಕ, ಪೊಲೀಸ್ ಇನ್ಸಪೆಕ್ಟರ್ ದರ್ಜೆಗಿಂತ ಕಡಿಮೆ ಅಲ್ಲದ [2][ಯಾರೇ ಅಧಿಕಾರಿಯನ್ನು,][2] ಅದಕ್ಕನುಸಾರವಾಗಿ ಶೋಧನೆಯನ್ನು ನಡೆಸಲು ಅಥವಾ ಪರಿಶೀಲನೆಯನ್ನು ನಡೆಸಲು ಮತ್ತು ಮುಖ್ಯವಾಗಿ–][2]

2. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 4ರ ಮೂಲಕ ಪ್ರತಿಯೋಜಿಲಾಗಿದೆ. (29–9–1986)

(i) ಅಂಥ ಸ್ವತ್ತನ್ನು, ದಸ್ತಾವೇಜಗಳನ್ನು, ಹಣವನ್ನು, ಬೆಳ್ಳಿ ಬಂಗಾರವನ್ನು, ಆಭರಣಗಳನ್ನು ಅಥವಾ ಇತರ ಬೆಲೆಯುಳ್ಳ ವಸ್ತುವನ್ನು ಅಥವಾ ಪದಾರ್ಥವನ್ನು ಇಡಲಾಗಿದೆಯಂದು ಅವನು ಸಂಶಯಪಡೆಯಲು ಕಾರಣ ಇದ್ದರೆ, ಯಾವುದೇ ಕಟ್ಟಡವನ್ನು ಅಥವಾ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು;

(ii) ಅವುಗಳ ಬೀಗದ ಕೈಗಳು ಲಭ್ಯವಾಗದಿದ್ದರೆ, (i)ನೇ ಉಪ–ಖಂಡದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಯಾವುದೇ ಬಾಗಿಲಿನ, ಲಾಕರಿನ, ತಿಜೊರಿಯ, ಅಲ್ಮೆರಾದ ಅಥವಾ ಇತರ ಕೋಶದ ಬೀಗವನ್ನು ಒಡೆಯಲು;

[1][(ii) ಯಾವ ವಸ್ತುವಿಗಾಗಿ ಶೋಧನೆಯನ್ನು ಮಾಡಬೇಕಾಗಿದಿಯೋ ಆ ಯಾವುದೇ ವಸ್ತವನ್ನು ಅವನಲ್ಲಿ ಬಚ್ಚಿಟ್ಟುಕೊಂಡಿರುವನೆಂದು ಯುಕ್ತವಾಗಿ ಶಂಕಿಸಲಾಗಿರುವ ಯಾವನೇ ವ್ಯಕ್ತಿಯನ್ನು ಶೋಧಿಸಲು;][1]

1. 1986ರ ಅಧಿನಿಯಮ ಸಂಖ್ಯೆ 28ರ, ಪ್ರಕರಣ 5ರ ಮೂಲಕ ಪ್ರತಿಯೋಜಿಲಾಗಿದೆ.

(iii) ಅಂಥ ಶೋಧನೆಯ ಪರಿಣಾಮವಾಗಿ ಕಂಡುಬಂದ ಯಾವುದೇ ಅಂಥ ಸ್ವತ್ತನ್ನು, ದಸ್ತಾವೇಜುಗಳನ್ನು, ಹಣವನ್ನು, ಬೆಳ್ಳಿ ಬಂಗಾರವನ್ನು, ಆಭರಣಗಳನ್ನು ಅಥವಾ ಇತರ ಬೆಲೆಯುಳ್ಳ ವಸ್ತವನ್ನು ಅಥವಾ ಪದಾರ್ಥವನ್ನು ವಶಪಡಿಸಿಕೊಳ್ಳಲು;

(iv) ಯಾವುದೇ ಸ್ವತ್ತಿನ ಅಥವಾ ದಸ್ತಾವೇಜುಗಳ ಮೇಲೆ ಗುರುತು ಚಿಹ್ನೆಗಳನ್ನು ಹಾಕಲು ಅಥವಾ ಅವುಗಳಿಂದ ಉದ್ಧೃತಭಾಗಗಳು ಅಥವಾ ಪ್ರತಿಗಳನ್ನು ಮಾಡಿಕೊಳ್ಳಲು ಅಥವಾ ಮಾಡಿಕೊಳ್ಳುವಂತೆ ಮಾಡಲು; ಅಥವಾ

(v) ಯಾವುದೇ ಅಂಥ ಸ್ವತ್ತಿನ, ದಸ್ತಾವೇಜುಗಳ, ಹಣದ, ಬೆಳ್ಳಿ ಬಂಗಾರದ, ಆಭರಣಗಳ ಅಥವಾ ಇತರ ಬೆಲೆಯುಳ್ಳ ವಸ್ತುವಿನ ಅಥವಾ ಪದಾರ್ಥದ ಬಗ್ಗೆ ಟಿಪ್ಪಣಿ ಅಥವಾ ವಿವರಣಾ ಪಟ್ಟಿಯನ್ನು ಮಾಡಲು

– ಅಧಿಕೃತಗೊಳಿಸಬಹುದು.

(2) ಶೋಧನೆಗೆ ಮತ್ತು ಜಪ್ತಿಗೆ ಸಂಬಂಧಪಟ್ಟ ದಂಡ ಪ್ರಕ್ರಿಯಾ ಸಂಹಿತೆ 1973ರ ಉಪಬಂಧಗಳು ಸಾಧ್ಯವಾಗಬಹುದಾದಷ್ಟರಮಟ್ಟಿಗೆ (1)ನೇ ಉಪ–ಪ್ರಕರಣದ ಮೇರೆಗಿನ ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವಿಕೆಗಳಿಗೆ ಅನ್ವಯವಾಗತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟನ್ನು, ಎಲ್ಲಾ ಉದ್ದೇಶಗಳಿಗಾಗಿ, ದಂಡ ಪ್ರಕ್ರಿಯಾ ಸಂಹಿತೆ, 1973ರ 93ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಹೊರಡಿಸಿದ ವಾರಂಟಾಗಿರುವುದಾಗಿ ಭಾವಿಸತಕ್ಕದ್ದು.][1]

**7. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕದ್ದು; ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯ ವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೊ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಆ ಮಾರ್ಪಾಟು ಅಥವಾ ರದ್ದಿಯಾತಿಯನ್ನು ಅಧಿಸೂಚಿಸಿದಂಥ ದಿನಾಂಕದಿಂದ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಆ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**8. ನಿರಸನ ಮತ್ತು ಉಳಿಸುವಿಕೆ.–** (1) ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ಆಧ್ಯಾದೇಶವನ್ನು (1981ರ ಕರ್ನಾಟಕ ಆಧ್ಯಾದೇಶ 4) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಆಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯಂದು ಭಾವಿಸತಕ್ಕದ್ದು.

# ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ನಿಯಮಗಳು, 1981

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು**


1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅನ್ವಯ
2. ಸಮನ್ಸ್ ಹೊರಡಿಸುವುದು ಮತ್ತು ಜಾರಿಮಾಡುವುದು



# ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ನಿಯಮಗಳು, 1981


ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

[1][ಅಧಿಸೂಚನೆ ಸಂಖ್ಯೆ ಡಿಪಿಎಆರ್ 12 ಎಸ್‌ಡಿಇ 81][1]

1. 19–8–1981ರ ರಾಜ್ಯಪತ್ರದಲ್ಲಿ ಪ್ರಕಟಿತವಾಗಿದೆ.

ಬೆಂಗಳೂರು, ದಿನಾಂಕ 19ನೇ ಆಗಸ್ಟ್, 1981

(ಜಿ.ಎಸ್.ಆರ್. 275 ದಿನಾಂಕ 15–10–1986ರ ಮೂಲಕ ತಿದ್ದುಪಡಿಯಾದಂತೆ)

ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1981ರ 7ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ:–

**1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅನ್ವಯ.–** (1) ಈ ನಿಯಮಗಳನ್ನು ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿದಾರರ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸುವ) ನಿಯಮಗಳು, 1981 ಎಂದು ಕರೆಯತಕ್ಕುದು.

(2) ಇವು, ಸರ್ಕಾರವು ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಸಮನ್ಸ್ ಹೊರಡಿಸುವುದು ಮತ್ತು ಜಾರಿಮಾಡುವುದು.–** (1) ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು, ಸಾಕ್ಷವನ್ನು ಕೊಡುವುದಕ್ಕೆ ಆಗಲಿ ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಆಗಲಿ ಅಥವಾ ಅವೆರಡಕ್ಕಾಗಿ ಯಾವ ವ್ಯಕ್ತಿಗಳ ಹಾಜರಾತಿಯು ಅದರ ಮುಂದೆ ಅಗತ್ಯವಾಗಿದೆಯೋ ಆ ವ್ಯಕ್ತಿಗಳಿಗೆ ಸಮನ್ಸ್ ಹೊರಡಿಸಬಹುದು.

(2) ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು ಹೊರಡಿಸಿದ ಪ್ರತಿಯೊಂದು ಸಮನು ದ್ವಿಪ್ರತಿಯಲ್ಲಿ ಮತ್ತು ಆದಷ್ಟುಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅನುಸೂಚಿ-1ರ ಅನುಬಂಧ (ಬಿ)ದ ನಮೂನೆ 13ರಲ್ಲಿ ಇರತಕ್ಕುದು ಮತ್ತು ಅದಕ್ಕೆ ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು ಸಹಿ ಹಾಕಿರತಕ್ಕುದು ಮತ್ತು [1][ಲೋಕಾಯುಕ್ತ ಅಥವಾ ಉಪಲೋಕಾಯುಕ್ತ ಅಥವಾ ಲೋಕಾಯುಕ್ತ ಸಿಬ್ಬಂದಿಯಲ್ಲಿನ ಒಬ್ಬ ಅಧಿಕಾರಿಯು][1] ವಿಚಾರಣಾ ಪ್ರಾಧಿಕಾರವಾಗಿದ್ದರೆ [1][ಲೋಕಾಯುಕ್ತದ][1] ಮೊಹರು ಸಹ ಹಾಕಿರತಕ್ಕುದು.

1. ಜಿ.ಎಸ್.ಆರ್. 275 ದಿನಾಂಕ 15-10-1986ರ (ಅಧಿಸೂಚನೆ ಸಂಖ್ಯೆ ಡಿಪಿಎಆರ್ 111 ಎಲ್ಆರ್ಓ 86 ದಿನಾಂಕ 9-10-1986ರ ಮೂಲಕ ಪ್ರತಿಯೋಜಿಸಲಾಗಿದೆ.)

(3) ವ್ಯಕ್ತಿಯನ್ನು ಸಾಕ್ಷವನ್ನು ಕೊಡಲು ಸಮನು ಮಾಡದೆಯೇ ದಸ್ತಾವೇಜನ್ನು ಹಾಜರುಪಡಿಸಲು ಸಮನ್ಸ್ ಕೊಡಬಹುದು ಮತ್ತು ಕೇವಲ ದಸ್ತಾವೇಜನ್ನು ಹಾಜರಪಡಿಸಲು ಯಾವನೇ ವ್ಯಕ್ತಿಗೆ ಸಮನ್ ಕೊಟ್ಟಿದ್ದರೆ, ಆ ದಸ್ತಾವೇಜನ್ನು ಹಾಜರುಪಡಿಸಲು ಖುದ್ದಾಗಿ ಹಾಜರಾಗುವುದಕ್ಕೆ ಬದಲು ಅವನು ಅಂಥ ದಸ್ತಾವೇಜನ್ನು ಹಾಜರುಪಡಿಸುವಂತೆ ಮಾಡಿದ್ದರೆ, ಆ ಸಮನ್ಸನ್ನು ಪಾಲಿಸಲಾಗಿದೆ ಎಂದು ಭಾವಿಸತಕ್ಕುದು.

(4) ದಸ್ತಾವೇಜುಗಳನ್ನು ಹಾಜರಪಡಿಸಲು ಹೊರಡಿಸುವ ಸಮನ್ಸನ್ನು, ಸಮನ್ ಮಾಡಲಾದ ವ್ಯಕ್ತಿಯ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿರ್ದಿಷ್ಟ ವಿವರಣೆಯ ಎಲ್ಲಾ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿಯು ಕೊಡಬಹುದು.

(5) ಈ ನಿಯಮಗಳ ಮೇರೆಗೆ ಅಧಿಕೃತಗೊಳಿಸಿದ ವಿಚಾರಣಾ ಪ್ರಾಧಿಕಾರವು ಹೊರಡಿಸಿದ ಪ್ರತಿಯೊಂದು ಸಮನ್ಸನ್ನು ಸಂದೇಶ ವಾಹಕನ ಮೂಲಕ ಪ್ರತ್ಯಕ್ಷವಾಗಿಯೇ ಆಗಲಿ ಅಥವ ಅಂಚೆಯ ಮೂಲಕವಾಗಿಯೇ ಆಗಲಿ ಜಾರಿಮಾಡತಕ್ಕುದು.

* * * *

The above translation of the Karnataka Departmental Inquiries (Enforcement of Attendance of Witnesses and Production of Documents) Act, 1981; and the Karnataka Departmental Inquiries (Enforcement of Attendance of Witnesses and Production of Documents) Rules, 1981 (Karnataka Act No 29 of 1981) shall be authoritative text in the Kannada Language under clause (ii) of section 5A of the Karnataka Official Language Act, 1963 (Karnataka Act No. 26 of 1963)

Bangalore
Date:

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಮ.ರಾ. ಹೆಗಡೆ

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

RKB